


ಇದೆ. ಗೌಡ ಹೆಸರಿನಲ್ಲೂ ಕೆಲವು ರೂಪಾಂತರಗಳಿವೆ. ಗೌಡರ್ ಎಂದು ಅಂತ್ಯವಾಗುವ ಈ ಹೆಸರಿನಲ್ಲೂ — ಹಿರಿಗೌಡರ್, ಕಿರಿಗೌಡರ್, ಮರಿಗೌಡರ್, ಮುದಿಗೌಡರ್, ಗೌಡಪ್ಪಗೌಡರ್, ಸಣ್ಣಪ್ಪಗೌಡರ್, ಯಾಲಕ್ಕಿಗೌಡರ್, ಗದ್ದಿಗೌಡರ್, ಕಾಶಿಗೌಡರ್, ಭರಮಗೌಡರ್, ಹಾಲಪ್ಪಗೌಡರ್! ಎಷ್ಟೊಂದು ರೂಪಾಂತರ!

ಕನ್ನಡ ಕರಾವಳಿಯಲ್ಲಿ ತುಳುವರ ಹಾಗೂ ಕೊಂಕಣಿಗರ ಅಡ್ಡ ಹೆಸರುಗಳಲ್ಲಿ ಬಹುತೇಕ ಊರುಗಳೇ! ಉದಾಹರಣೆಗೆ ಪಡುಬಿದ್ರಿ, ಪಡಿಯಾರ, ಗಡಿಯಾರ, ಪಲಿಮಾರು, ಕಲ್ಯಾಣಪುರ, ಹಳದೀಪುರ, ಪಾಂಗಳ, ಕಾರ್ನಾಡ, ಮೂರ್ನಾಡ, ಪಡುಕೋಣೆ, ಗುಣವಂತೆ, ಕಾಯ್ಕಿಣಿ, ಹಟ್ಟಿಯಂಗಡಿ, ಉದ್ಯಾವರ, ಉಚ್ಚಿಲ, ಗೋಕರ್ಣ, ಒಂಭತ್ತುಕೆರೆ, ಬ್ರಹ್ಮಾವರ, ಬೈಂದೂರು, ಭಟ್ಕಳ, ಹೊಳ್ಳ ಇತ್ಯಾದಿ. ಕೆಲವು ಕೊಂಕಣಿಗರ ಅಡ್ಡ ಹೆಸರುಗಳಿಗೆ ಮೂಲ ಹುಡುಕುವುದು ಕಷ್ಟ.– ಉದಾಹರಣೆಗೆ ಪ್ರಭು, ಪೈ, ಕಾಮತ್ ಇತ್ಯಾದಿ. ಕೆಲವು ಅಡ್ಡ ಹೆಸರುಗಳಿಂದಲೇ ಕರಾವಳಿಯವರನ್ನು ಗುರುತಿಸಬಹುದು– – ಭಟ್ಟ, ಅಚಾರ್ಯ, ಉಪಾಧ್ಯ, ಕಾರಂತ, ಕೋಟ್ಯಾನ್, ಪುತ್ರನ್, ಸಾಲಿಯಾನ್, ಶೆಟ್ಟಿ, ರೈ, ಆಳ್ವ ಇತ್ಯಾದಿ. ಮೈಸೂರು ಪ್ರಾಂತ್ಯದಲ್ಲಿ ಮಾತ್ರ ಅಡ್ಡಹೆಸರು ಇನಿಶಿಯಲ್ಲಿನ ರೂಪ ಪಡೆದುಕೊಂಡಂತಿದೆ.

ಮುಸ್ಲಿಮರ ಹಾಗೂ ಕ್ರೈಸ್ತರ ಮೊದಲ ಹಾಗೂ ಅಡ್ಡ ಹೆಸರಿನ ಬಗ್ಗೆ ನನಗೆ ಬಹಳ ಗೊಂದಲ. ಮುಸಲ್ಮಾನರ ಬಹಳಷ್ಟು ಹೆಸರುಗಳಲ್ಲಿ ಮೊಹಮ್ಮದ್ ಇದ್ದೇ ಇರುತ್ತದೆ. ಇದು ಕೆಲವೊಮ್ಮೆ ಮೊದಲ ಹೆಸರಿನ ತರಹ ಕಾಣಿಸಿದರೆ, ಕೆಲವೊಮ್ಮೆ ಅಡ್ಡ ಹೆಸರಿನ ತರಹ! ಉದಾಹರಣೆಗೆ ಮೊಹಮ್ಮದ್ ಅನ್ವರ್ ಮತ್ತು ಮುಷ್ತಾಕ್ ಮೊಹಮ್ಮದ್. ಇದೇ ರೀತಿ ಕ್ರೈಸ್ತರ ಎಲ್ಟನ್ ಜಾನ್ ಮತ್ತು ಜಾನ್ ಕೆನಡಿ ಇತ್ಯಾದಿ.

ಭಾರತದಲ್ಲಿ ಇತ್ತೀಚೆಗೆ ವಿದೇಶೀಯರಂತೆ ಹೆಸರನ್ನು ಪೂರ್ಣ ಬರೆಯುವ ಅಭ್ಯಾಸ ಬೆಳೆಯುತ್ತಿದೆ. ಇದು ಕೆಲವೊಮ್ಮೆ ಅನುಕೂಲಕರ, ಕೆಲವೊಮ್ಮೆ ಗೊಂದಲಕಾರಿ. ಕೆಲವರು ಅಡ್ಡ ಹೆಸರನ್ನು ಬಳಸದೇ, ಬರೀ ಮೊದಲ ಹಾಗೂ ತಂದೆ ಹೆಸರನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ ನಟ ರಮೇಶ್ ಅರವಿಂದ್, ಕ್ರಿಕೆಟಿಗ ರವಿಚಂದ್ರನ್ ಅಶ್ವಿನ್.. ಇದರಲ್ಲಿ ಇವರ ಹೆಸರು ಯಾವುದು ಹಾಗೂ ತಂದೆಯ ಹೆಸರು ಯಾವುದು?

ಕೆಲವು ಅಡ್ಡಹೆಸರುಗಳದ್ದು ಅಂತರರಾಷ್ಟ್ರೀಯ ಗೊಂದಲ! ಬೈಲಹೊಂಗಲದ ಕಲ್ಲುಕುಟುಕರ್ ಮತ್ತು ಅಮೆರಿಕದ ರಾಕ್‌ಫೆಲ್ಲರ್ ಕುಟುಂಬದವರು ಬಂಧುಗಳಿರಬಹುದೆ? ರಾಮದುರ್ಗದ ಕಡೆಯ ಕುರಿ ಎಂಬವರೂ, ಇಂಗ್ಲೆಂಡ್ ಕ್ರಿಕೆಟಿಗ ಅಲನ್ ಲ್ಯಾಂಬ್ ಅವರೂ ನೆಂಟರಿರಬಹುದೆ? ಕಮ್ಮಾರ ಮತ್ತು ಬ್ಲಾಕ್ ಸ್ಮಿತ್, ಅಕ್ಕಸಾಲಿ ಮತ್ತು ಗೋಲ್ಡ್ ಸ್ಮಿತ್ ಪರಸ್ಪರ ಭೇಟಿಯಾದರೆ ಹೇಗಿರಬಹುದು? ಅಂದ ಹಾಗೆ, ಬಿಲ್ ಗೇಟ್ಸ್‌ಗೆ ಅವರ ಮನೆಯ ಗೇಟ್‌ನಿಂದಲೇ ಆ ಅಡ್ಡಹೆಸರು ಬಂದಿರಬಹುದೆ?